FirstRanker.com
Firstranker's choice
www.FirstRanker.com www.FirstRanker.com

This question paper consists of 37 questions and 8 printed pages.

Roll No.
ರೋಲ್ ನಂ.

Code No. 44/S/A/K

# KANNADA
## ಕನ್ನಡ
## (208)

Day and Date of Examination
ಪರೀಕ್ಷೆಯ ದಿನ ಮತ್ತು ತಾರೀಖು ______

Signature of Invigilators
ಉಸ್ತುವಾರಿದಾರರ ರುಜು

1. ______

2. ______

firstranker.com

ಸಾಮಾನ್ಯ ಸೂಚನೆಗಳು :

1 ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯ ಮೊದಲ ಪುಟದಲ್ಲಿ ತಮ್ಮ ರೋಲ್ ನಂಬರ್ ಬರೆಯಬೇಕು.

2 ನಿಮಗೆ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಮೊದಲ ಮೇಲ್ಭಾಗದಲ್ಲಿ ಕೊಟ್ಟಿರುವ ಒಟ್ಟು ಪುಟಗಳ ಸಂಖ್ಯೆ ಹಾಗೂ ಒಟ್ಟು ಪ್ರಶ್ನೆಗಳ ಸಂಖ್ಯೆಗೆ ತಕ್ಕಂತೆ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳೂ ಹಾಗೂ ಪ್ರಶ್ನೆಗಳು ಮುದ್ರಿತವಾಗಿದೆಯೇ ಎಂದು ಪರೀಕ್ಷಿಸಿ, ಪ್ರಶ್ನೆಗಳ ಕ್ರಮಸಂಖ್ಯೆ ಸರಿಯಾಗಿದೆಯೇ ಎಂದೂ ಪರೀಕ್ಷಿಸಿ.

3 ವಸ್ತು ನಿಷ್ಠ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಪ್ರಶ್ನೆಯ ಜೊತೆಯಲ್ಲಿ ನೀಡಿರುವ ಉತ್ತರಗಳಿಂದಲೇ ಆರಿಸಿಕೊಳ್ಳಬೇಕು. ನಿಮಗೆ ಕೊಟ್ಟಿರುವ ಬೇರೆ ಉತ್ತರ ಪತ್ರಿಕೆಯಲ್ಲಿ ಸರಿಯಾದ ಉತ್ತರ ಸಂಖ್ಯೆ (A), (B), (C), (D) ಯನ್ನು ಬರೆಯಬೇಕು.

4 ಎಲ್ಲಾ ಪ್ರಶ್ನೆಗಳಿಗೂ ನಿರ್ದಿಷ್ಟ ಸಮಯದಲ್ಲಿಯೇ ಉತ್ತರ ಬರೆಯಬೇಕು. ವಸ್ತುನಿಷ್ಠ ಪ್ರಶ್ನೆಗಳಿಗೆ ಬೇರೆ ಸಮಯವನ್ನು ನೀಡಲಾಗುವುದಿಲ್ಲ.

5 ನಿಮ್ಮ ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ನಿರ್ದಿಷ್ಟ ಜಾಗದಲ್ಲಿ ಮಾತ್ರ ನಿಮ್ಮ ರೋಲ್ ನಂಬರ್ ಬರೆಯಬೇಕು. ಹಾಗಲ್ಲದೇ ಬೇರೆ ಎಲ್ಲಿಯೂ ನಿಮ್ಮ ಗುರುತು ನೀಡಬಹುದಾದ ನಿಮ್ಮ ರೋಲ್ ನಂಬರ್‌ಅನ್ನು ಬರೆಯಕೂಡದು. ಒಂದು ವೇಳೆ ಹಾಗೇನಾದರೂ ಕಂಡುಬಂದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಅನರ್ಜಿತಗೊಳಿಸಲಾಗುವುದು.

6 ನಿಮ್ಮ ಪ್ರಶ್ನೆ ಪತ್ರಿಕೆಯ ಕೋಡ್ ನಂಬರ್ **44/S/A/K** ಉತ್ತರ ಪತ್ರಿಕೆಯಲ್ಲಿ ಬರೆಯಿರಿ.



www.FirstRanker.com

FirstRanker.com
Firstranker's choice
www.FirstRanker.com www.FirstRanker.com

# KANNADA

## ಕನ್ನಡ

## (208)

ಸಮಯ : 3 ಗಂಟೆಗಳು ] [ಗರಿಷ್ಠ ಅಂಕ : 100

ಸೂಚನೆಗಳು : (1) ಎಲ್ಲಾ ಪ್ರಶ್ನೆಗಳೂ ಕಡ್ಡಾಯ.

(2) ಪ್ರಶ್ನೆ 1 ರಿಂದ 20 ರ ವರೆಗೆ ಪ್ರತಿ ಪ್ರಶ್ನೆಗೆ ಒಂದು ಅಂಕ.

1 ಆಹುತಿ ಈ ಕತೆಯು ಯಾವ ವಿಷಯಕ್ಕೇ ಸಂಬಂಧಿಸಿದೆ 1×20=20

(A) ಒಬ್ಬ ವ್ಯಕ್ತಿಯ ಪ್ರವಾಸ (B) ಒಬ್ಬನ ಸಹಾಸ

(C) ಸಮಾಜದ ಪರಿಚಯ (D) ವರದಕ್ಷಿಣೆ

2 ಕನ್ನಡ ಸಂಧಿಗಳಲ್ಲಿ ಎಷ್ಟು ಪ್ರಕರಗಳು

(A) 4 (B) 5

(C) 3 (D) 2

3 ಜಶ್ತ್ವ ಎಂದರೆ ..............

(A) ಗಜಡದಬ (B) ಕಚಟತಪ

(C) ಜಬಗಡದ (D) ಙಞಣನಮ

4 ಕೆಂಪಯ್ಯನವರ ಅಜ್ಜ ಮುಲ್ತಾಚಂದಿಕಿಲ್ಲಾ ಅವಲಂಬಿಸಿದ್ದ ಉದ್ಯೋಗ.................

(A) ವ್ಯಾಪಾರ (B) ಮೀನುಗಾರಿಕೆ

(C) ಕೃಷಿ (D) ಹಡಗುಕಟ್ಟುವುದು

5 'ಕಾಯಾಕಮೇಕೈಲಾಸ' ಇದನ್ನು ಹೇಳಿದ ಮಹಾನುಭಾವ................

(A) ಅಕ್ಕಮಹಾದೇವಿ (B) ರಾಮಾನುಜಾಚಾರ್ಯ

(C) ಬಸವಣ್ಣ (D) ದಾಸಿಮಯ್ಯ

6 'ಎಳೆಯಪಿಂಬಿಕಾಯಿ' ಎಂದು ಮೇಷ್ಟರ ಹೆಂಡತಿ ಯಾರನ್ನು ಹೇಳಿದಳು ?

(A) ಇನ್ಸ್‌ಪೆಕ್ಟರನ್ನು (B) ತನ್ನಗಂಡನನ್ನು

(C) ಶಾಸ್ತ್ರಿಗಳನ್ನು (D) ವಿದ್ಯಾರ್ಥಿಗಳನ್ನು

7 ಈಗಿನ ನಮ್ಮೂರಿನ ಶಾಲೆಗಳಲ್ಲಿ ಇರುವ ಶಿಕ್ಷಕರುಗಳ ಸಂಖ್ಯೆ.................

(A) 10 (B) 8

(C) 1 (D) 3



www.FirstRanker.com

FirstRanker.com
Firstranker's choice
www.FirstRanker.com www.FirstRanker.com

8 ಬಾತ್‌ರೂಮ್‌ನ ಬಾಗಿಲನ್ನು ತೆರೆದವರು
(A) ಲೇಖಕರ ಮಗ (B) ಅಮೇರಿಕನ್ ಸರ್ಕಸ್ ಕಾರ್ಯದರ್ಶಿ
(C) ಲೇಖಕರ ಹೆಂಡತಿ (D) ಲೇಖಕರು

9 'ಬುಡ್ಡಿ' ಇದರ ಅರ್ಥ -
(A) ಧಾನ್ಯ (B) ಮುದುಕಿ
(C) ಸೀಮೆ ಎಣ್ಣೆದೀಪ (D) ಗುಡಿಸಲು

10 ಮೇಷ್ಟರು ಪಾಠವನ್ನು ಹೇಳಿದರು. ಇದರಲ್ಲಿ ಕರ್ತೃಪದ ಗುರುತಿಸಿ
(A) ಮೇಷ್ಟರು (B) ಪಾಠವನ್ನು
(C) ಹೇಳಿದರು (D) ಇದಾವುದೂ ಅಲ್ಲ

11 ರಾಮಧಾನ್ಯ ಚರಿತೆ ಇದನ್ನು ಬರೆದವರು
(A) ಕನಕದಾಸರು (B) ಪುರಂದರದಾಸರು
(C) ತ್ಯಾಗರಾಜರು (D) ತುಳಸಿದಾಸರು

12 ಕನ್ನಡಿಗರ ಕಣ್ಣು ತೆರೆಸುವುದಕ್ಕೆ ಪ್ರಖರ ಜ್ಯೋತಿಯಾದದ್ದು...............
(A) ಚೆನ್ನಮ್ಮನ ದುಃಖಾಂತ ದೃಶ್ಯ (B) ಬ್ರಿಟಿಷರ ಹೇಡಿತನ
(C) ಜನರ ಸಾಹಸ ಪ್ರದರ್ಶನ (D) ದುಡಿಮೆಯ ಪ್ರೀತಿ

13 ಗೌರಿಶಂಕರವನ್ನು ಮೊದಲು ಹತ್ತಿದ್ದು................
(A) ಮೇ 10, 1910 (B) ಜನವರಿ 15, 1958
(C) ಮೇ 29, 1953 (D) ಫೆಬ್ರವರಿ 2, 1953

14 ತವರು ಬಣ್ಣ ಎಂದರೆ....................
(A) ಸುಂದರತೆ (B) ತಂದೆ
(C) ತಾಯಿ (D) ನೀರೆ

15 ಕ್ಷೌರಿಕನ ಹೊಟ್ಟೆ ಡೊಳ್ಳು ಬಂದು ಸಾವಿಗೀಡಾಗಲು ಕಾರಣ..............
(A) ವಾದ್ಯದವರು ತಬಲ ನುಡಿಸಿದ್ದರಿಂದ (B) ತೊಗಟೀಗಿಡ ನೆಟ್ಟಿದ್ದರಿಂದ
(C) ಊರುಬಿಟ್ಟು ಹೋದದ್ದರಿಂದ (D) ರಾಜನ ಮಗನ ಶಾಪದಿಂದ

16 ದಕ್ಷಿಣಭಾರತದ ಸಾಹಿತಿಗಳ ಮತ್ತು ಕಲಾವಿದರ ಗೋಷ್ಠಿಗೆ ಭೇಟಿಕೊಟ್ಟವನು
(A) ಜವಾಹರಲಾಲ್ ನೆಹರೂ (B) ಇಂದಿರಾಗಾಂಧಿ
(C) ಲೇಖಕರ ಮಿತ್ರರು (D) ಮಹಾತ್ಮಾಗಾಂಧಿ



www.FirstRanker.com

17 'ಓಟುರುಕ' - ಎಂಬುದೊಂದು.............

(A) ನೀರುನಾಯಿ (B) ಕೇಸರಿನ ಆಮೆ

(C) ನೀರುಕುದುರೆ (D) ಓತಿಕ್ಯಾತ

18 ವರಲೋಕದಲ್ಲಿ ಹೃದಯ ಬೇಧಕ ಪ್ರಶ್ನೆಗಳನ್ನು ಕೇಳುವವನು

(A) ವೀರರಾ (B) ವಿಜ್ಞಾನಿಗಳು

(C) ಪ್ರಜ್ಞರು (D) ಸಾಹಿತಿಗಳು

19 ಅತಿಮಬ್ಬೆಯನ್ನು ವಂದಿಸುತ್ತಿದ್ದವರು..............

(A) ಪುರಜನರು (B) ಬುಧಜನರು

(C) ಸಂತೆಜನರು (D) ನಾಯಕರು

20 ಪಂಪನ ತಾಯಿಯ ಹೆಸರು

(A) ಅಬ್ಬೆ (B) ಅಬ್ಬಣಬ್ಬೆ

(C) ಅಬ್ಬಕಬ್ಬೆ (D) ಅಬ್ಬಲಬ್ಬೆ

## (ಪದ್ಯಭಾಗ)

21 ಇವುಗಳಲ್ಲಿ ಎರಡು ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ 2×1=2

(i) ಬಿರುದ ಕೆದರಿದನಾ - ಈ ಕವನವನ್ನು ಯಾವ ಕೃತಿಯಿಂದ ಆರಿಸಿದೆ ?

(ii) ಪು.ತಿ.ನ. ಅವರು ಯಾವುದಕ್ಕೆ ಸೋತುಹೋದರು ?

(iii) ಮಾನವನು ಹೇಗೆ ದುಃಖವನ್ನು ಅನುಭವಿಸುತ್ತಾನೆ ?

(iv) ವಚನಗಳಲ್ಲಿ ಕಂಡುಬರುವ ಬಹುಮುಖ್ಯಗುಣಗಳೇನು ?

22 ಇವುಗಳಲ್ಲಿ ಎರಡು ಪ್ರಶ್ನೆಗಳಿಗೆ 3-4 ವಾಕ್ಯದಲ್ಲಿ ಉತ್ತರ ಬರೆಯಿರಿ - $2\frac{1}{2} \times 2 = 5$

(i) ಭರತ ಭೂಮಿಯ ಬಗ್ಗೆ ಕವಿ ವ್ಯಕ್ತ ಪಡಿಸುವ ಉನ್ನತ ಭಾವನೆಗಳನ್ನು ತಿಳಿಸಿರಿ.

(ii) ಉತ್ತರನು ಯಾರನ್ನು ತನ್ನೋಡನೆ ಹೋಲಿಸಿಕೊಂಡಿದ್ದಾನೆ ?

(iii) ನವಸಮಾಜ ನಿರ್ಮಾಣಕ್ಕೆ ಕೈಗೊಳ್ಳಬೇಕಾದ ಕಾರ್ಯಗಳೇನು ?

23 ಇವುಗಳಲ್ಲಿ ಒಂದು ಪ್ರಶ್ನೆಗೆ ಸುಮಾರು ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 6

(i) ಅಡಿಗರು ಬರೆದ ಕವನದಲ್ಲಿ ಭಾವೈಕ್ಯತೆ ಹೇಗೆ ಮೂಡಿದೆ ? ನಿಮ್ಮ ಮಾತುಗಳಲ್ಲಿ ಬರೆಯಿರಿ.

(ii) ಹುಮ್ಮಲುಗಾರನು ಉತ್ತರವನ್ನು ಯಾವರೀತಿ ಉಚ್ಚರಿಸಿದ ಎಂಬುದನ್ನು ವ್ಯಕ್ತಪಡಿಸಿರಿ.

FirstRanker.com
Firstranker's choice
www.FirstRanker.com www.FirstRanker.com

## ಗದ್ಯಭಾಗ

24 ಇವುಗಳಲ್ಲಿ ಮೂರು ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ : $1 \times 3 = 3$

(i) ಓಟುರುಕಗಳು ಬಿಸಿಲು ಕಾಯಿಸುತ್ತಾ ಎಲ್ಲಿ ಕುಳಿತಿದ್ದವು ?

(ii) ಹಿಟ್‌ನೀರು ಶುದ್ಧೀಕರಣಕ್ಕೆ ತಗಲುವ ವೆಚ್ಚವೆಷ್ಟು ?

(iii) ಗೆಲರಿಯಲ್ಲಿ ಕುಳಿತಾಗ ಲೇಖಕರಿಗೆ ಎನೇನಿಸಿತು ?

(iv) ಗೌರಮ್ಮನವರು ಬರೆದ ಕಥಾಸಂಕಲನ ಯಾವುದು ?

25 ಇವುಗಳಲ್ಲಿ ಎರಡು ಪ್ರಶ್ನೆಗಳಿಗೆ 3-4 ವಾಕ್ಯಗಳಲ್ಲಿ ಉತ್ತರ ಬರೆಯಿರಿ. $2\frac{1}{2} \times 2 = 5$

(i) ಧಾರ್ಮಿಕರು ಕೈಗೊಳ್ಳುವ ಬೆಳಗಿನ ಜಾವದ ಸುತ್ತಾಟದ ಬಗ್ಗೆ ತಿಳಿಸಿ.

(ii) ಹುಡುಗಿಯರ ಬಗ್ಗೆ ಸೋಬಾನ ಚಿಕ್ಕಮ್ಮನ ಅಭಿಪ್ರಾಯವೇನು ?

(iii) ಕ್ಷೌರಿಕನ ಸಾವಿಗೆ ಕಾರಣವೇನು ?

26 ಇವುಗಳಲ್ಲಿ ಒಂದು ಪ್ರಶ್ನೆಗೆ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 6

(i) ಚೆನ್ನಮ್ಮ ರಾಣಿಯ ಸಹಾಸ, ಧೈರ್ಯ, ನಾಡಿನ ಪ್ರೀತಿಯ ಬಗ್ಗೆ ನಿಮ್ಮ ಮಾತುಗಳಲ್ಲಿ ವಿವರಿಸಿರಿ.

(ii) 'ನಮ್ಮ ಮೇಷ್ಟ್ರು' ಎಂಬ ಹೆಸರು ಈ ಕಥೆಗೆ ಹೇಗೆ ಒಪ್ಪುತ್ತದೆ ? ವಿವರಿಸಿರಿ.

27 ಈ ಪದ್ಯದ ಭಾವಾರ್ಥ ಬರೆಯಿರಿ. 5

ಆದರೆ ನನ್ನ ಕವಿತೆ, ಹುಟ್ಟಿದ್ದು ಮಹಲಿನಲ್ಲಿ,
ಪಿಳಿಪಿಳಿ ಕಣ್ಣು ಬಿಟ್ಟದ್ದು ಝಗಝಗಿಸುವ
ದೀಪಗಳ ಬೆಳಕಿನಲ್ಲಿ, ಬೆಳೆದಿದ್ದು ಕಲ್ಪನೆಯ
ಮೂಸೆಯಲ್ಲಿ, ಅರಳಿದ್ದು ಕನಸಿನಲ್ಲಿ.

ಆದರೂ ಈ ಕವಿತೆಗೆ
ತುಡಿತ-ಮಿಡಿತಗಳಿಗೆ ಸ್ಪಂದಿಸುವ ಹೃದಯವಿದೆ
ಮನದಲ್ಲಿ ಅವರಿಗಾಗೀಯೇ ಹೊಸೆದ ಹೊಸ ಕನಸಿದೆ.
ಕಣ್ಣ ಬಿಂಬದಲ್ಲಿ ಕೈಕೈ ಬೆಸೆದು ಜೊತೆಯಾಗಿ
ಹೆಜ್ಜೆಯಿಡುವ ಹಂಬಲವಿದೆ.

28 ಈ ಪದಗಳ ಸಂಧಿ ಬಿಡಿಸಿ ಸಂಧಿಯ ಹೆಸರು ಬರೆಯಿರಿ 2

ವಿದ್ಯಾರ್ಥಿ, ವಿವಿಧೋದ್ದೇಶ



www.FirstRanker.com

FirstRanker.com
Firstranker's choice
www.FirstRanker.com www.FirstRanker.com

29 ಈ ಪದಗಳ ವಿಗ್ರಹವಾಕ್ಯ ಮಾಡಿ ಸಮಾಸದ ಹೆಸರು ಬರೆಯಿರಿ - 2

ಆಪುರುಷ, ಅರಮನೆ

30 ಕೆಳಗಿನ ಸಾಲಿಗೆ ಗಣಪ್ರಸ್ತಾರ ಹಾಕಿ ಛಂದೋರೂಪ ತಿಳಿಸಿರಿ - 3

ತೆಂಕಣಗಾಳಿಸೋಂಕಿದೊಡಮೊಳ್ನುಡಿಗೇಳ್ದೊಡಮಿಂಪಾನಾಳ್ದ ಗೇ

31 ಖಾಲಿ ಇರುವ ಜಾಗವನ್ನು ಸೂಕ್ತಪದದಿಂದ ಭರ್ತಿ ಮಾಡಿರಿ $\frac{1}{2} \times 4 = 8$

(i) .................... ನಗರದ ಫುಟಬಾಲ್ ಕಿಂಪಯ್ಯನವರು.

(ii) ಸೂಯೋಧನನಿಗೆ ಸಮಾನವಾದ ಹೆಸರು ....................

(iii) ಕುಮಾರವ್ಯಾಸನ ಜನ್ಮಸ್ಥಳ ಗದುಗಿನ ಸಮೀಪದ ....................

(iv) ನನ್ನದು ನಿಜವಾಗಿಯೂ .................... ಹೃದಯ.

(v) ಜಾತಿ ಮತದ ಗುಹೆಗಳಿಂದ .................... ಬಯಲಿಗೆ.

(vi) ನನ್ನ ಕವಿತೆಯನ್ನು ಬರೆದವರು ....................

(vii) ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು .................... ಜಿಲ್ಲೆಯವರು.

(viii) ಬಸವಣ್ಣನವರ ಅಂಕಿತನಾಮ ....................

32 ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. (ಮಿತಿ 150 ಶಬ್ದಗಳು) 10

(i) ನಿರುದ್ಯೋಗ ಸಮಸ್ಯೆ

(ii) ಕರ್ನಾಟಕದ ರಾಜಕೀಯ ಸ್ಥಿತಿ - ಗತಿ

33 ಈ ಹೇಳಿಕೆಯ ಅರ್ಥವನ್ನು ಸುಮಾರು 8-10 ವಾಕ್ಯಗಳಲ್ಲಿ ವಿವರಿಸಿರಿ 5

ಮಾತೇ ಮುತ್ತು ಮಾತೇ ಮೃತ್ಯು

ಅಥವಾ

ಅರಮನೆಗಿಂತ ನೆರಮನೆ ಲೇಸು.

34 ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಅನುವಾದಕ ಹುದ್ದೆ ಖಾಲಿ ಇದೆ. 5

ಅದಕ್ಕೆ ಸಂಬಂಧಿಸಿ ಸೂಕ್ತವಾದ ಅರ್ಜಿ ಬರೆಯಿರಿ

ನೀವು ಕೃಷ್ಣ ಮೂರ್ತಿ / ಕಲ್ಪನಾ, M.A. (ಕನ್ನಡ) ಪದವೀಧರರು. ಹಾಗೂ ಎರಡು ವರ್ಷದ ಅನುಭವವಿದೆ. ವಯಸ್ಸು - 25 ವರ್ಷ.

35 ನಿಮ್ಮ ಊರಿಗೆ ಆಸ್ಪತ್ರೆಯ ಅವಶ್ಯಕತೆ ಇದೆ. ಇದಕ್ಕೆ ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಪತ್ರ ಬರೆಯಿರಿ. 5

ನೀವು ರಾಹುಲ / ರಮ್ಯಶ್ರೀ, ನಿಮ್ಮ ಊರು ಹೊಳೆ ನರಸೀಪುರ, ಕರ್ನಾಟಕ.



www.FirstRanker.com

FirstRanker.com
Firstranker's choice
www.FirstRanker.com www.FirstRanker.com

36 ನೀವು ಚಂದ್ರಶೇಖರ ಎಂದು ಭಾವಿಸಿಕೊಂಡು ಅಡ್ಡಗೆರೆ ಎಳೆದ (ಕ್ರಾಸ್‌ಮಾಡಿದ) 5112/- ರೂಪಾಯಿಗಳ ಡ್ರಾಫ್ಟ್‌ನ್ನು ರಮಾನಂದ ಸ್ವಾಮಿ ಅವರಿಗೆ ದಿನಾಂಕ 3 - August - 2010 ರಂದು ನೀಡಿರುವಿರಿ ಇದನ್ನು ಸರಿಯಾದ ವಿವರಣೆಯೊಂದಿಗೆ ಬ್ಯಾಂಕಿನ ಉಳಿತಾಯ ಖಾತೆಯ ಹಣ ಸಂದಾಯಪತ್ರವನ್ನು / ನಮೂನೆಯನ್ನು ಸೂಕ್ತವಾಗಿ ಭರ್ತಿಮಾಡಿರಿ 5


ವಿವರಗಳು :

ಶಾಖೆ : ಕುವೆಂಪುನಗರ, ಮೈಸೂರು

ದಿನಾಂಕ : 7-August 2010 ಖಾತೆ ಸಂಖ್ಯೆ 9341

ಚೆಕ್ : ಸಿಂಡಿಕೇಟ್ ಬ್ಯಾಂಕ್

ಶಾಖೇ : ಬೆಂಗಳೂರು





www.FirstRanker.com

FirstRanker.com
Firstranker's choice
www.FirstRanker.com www.FirstRanker.com

37 ಕೆಳಗೆ ಕಾಣಿಸಿರುವ ಗದ್ಯಭಾಗ ಓದಿ ಆದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ -

ಒಂದು ದಿನ ಕಗ್ಗತ್ತಲೆಯ ರಾತ್ರಿಯಲ್ಲಿ ತಿಮ್ಮನಾಯಕ ಸಾಳ್ವ ಸಿಂಹನ ಕುದುರೆಯನ್ನು ಅಪಹರಿಸುವಾದಕ್ಕಾಗಿ ಆತನ ಪಾಳೆಯವನ್ನು ಒಬ್ಬನೇ ಹೊಕ್ಕ. ಕುದುರೆಯ ಹಗ್ಗವನ್ನು ಉಜ್ಜುತ್ತಿರುವಾಗ ಕುದರೆ ಹೇಂಕರಿಸುತ್ತ ಕಾಲು ಕೆದರಿತು. ಆ ಧ್ವನಿಗೆ ಕುದರೆಯ ಚೌಕರ ಎಚ್ಚೆತ್ತು ನಿದ್ದೆಗಣ್ಣಲ್ಲೆ ತಡವರಿಸುತ್ತ ಕುದುರೆಯ ಬಳಿಗೆ ಬಂದ. ಅಷ್ಟರಲ್ಲಿ ತಿಮ್ಮನಾಯಕ ಕುದುರೆಯ ಗೋದಲಿಯಲ್ಲಿ ಮೈ ಮೇಲೆ ಹುಲ್ಲು ಎಳೆದುಕೊಂಡು ಮಲಗಿದ್ದ. ಆಗ ಚೌಕರ ಸಡಿಲವಾಗಿದ್ದ ಕುದುರೆಯ ಗೂಟವನ್ನು ಕಿತ್ತು ಮತ್ತೊಂದುಕಡೆ ಬಡಿಯ ತೊಡಗಿದ. ಆ ಗೂಟ ತಿಮ್ಮನಾಯಕನ ಬಲ ಅಂಗೈಯಲ್ಲಿ ನಟ್ಟು ಪಾರಾಗಿ ನೆಲದಲ್ಲಿ ಇಳಿಯಿತು. ಆದರೂ ಸತ್ವಶಾಲಿ ಕ್ಷತ್ರಿಯನಾದ ತಿಮ್ಮನಾಯಕನ ಹಾಯುಟ್ಟಲಿಲ್ಲ. ಮಿಸುಕಾಡಲಿಲ್ಲ ! ಕುದುರೇ ಚಾಕಾರ ಮಲಗಿದ. ಆತನಿಗೆ ಗಾಢ ನಿದ್ರೆ ಹತ್ತಿತ್ತು ತಿಮ್ಮನಾಯಕ ತನ್ನ ಗುರುದತ್ತವಾದ ಕೈ ಅಂಬಿನಿಂದ ತನ್ನ ಬಲಗೈ ಮಣಿಕಟ್ಟನ್ನೇ ಕೊಯ್ದುಕೊಂಡು ತನ್ನ ಆ ಮೊಂಡಗೈಗೆ ಮುಂಡಾಸ ಸುತ್ತಿ ಕುದುರೆಯನ್ನು ಅಪಹರಿಸಿ ಸುರಕ್ಷಿತವಾಗಿ ದುರ್ಗಮೇರಿ ಹೋದ.

ಪ್ರಶ್ನೆಗಳು :

(i) ತಿಮ್ಮನಾಯಕನು ಏನನ್ನು ಅಪಹರಿಸಲು ಒಬ್ಬನೇ ಹೊಕ್ಕ ? 1

(ii) ಕುದುರೆಯಾವಾಗ ಹೇಂಕರಿಸಿತು ? 1

(iii) ಕುದುರೆಯ ಧ್ವನಿ ಕೇಳಿ ಚೌಕಾರ ಏನು ಮಾಡಿದ ? 2

(iv) ಚೌಕಾರನಿಗೆ ನಿದ್ದೆ ಹತ್ತಿದಾಗ ತಿಮ್ಮನಾಯಕ ಏನು ಮಾಡಿದ ? 2

(v) 'ಸತ್ವಶಾಲಿ' ಈ ಪದವನ್ನು ನಿಮ್ಮ ವಾಕ್ಯದಲ್ಲಿ ಪ್ರಯೋಗಿಸಿರಿ. 1



www.FirstRanker.com